ಶ್ರೀ ಟಿ.ಬಿ. ಜಯಚಂದ್ರ : ತಾವು ಹೇಳಿರ್ದನ್ನು ನಾನು ಒಪ್ಪುತ್ತೇನೆ. ಒಂದು ಸಾವಿರ ಕೋಟಿ ರೂಪಾಯಿ ಬರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಮಾಡಲಿಕ್ಕೆ ತಯಾರಿದ್ದೇನೆ. I am ready to do it.

ಅಧ್ಯಕ್ಷರು : ಅರ್ಧ ಗಂಟೆ ಕಾಲಾವಧಿ ಚರ್ಚೆ ಮಾಡೋಣ.

(ಗೊಂದಲ)

ಭೂಮಾಪನಾ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ

73 (156)

ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು)

ಅ) ಮದ್ದೂರು ತಾಲ್ಲೂಕು, ಭೂಮಾಪನಾ ಇಲಾಖೆಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆಯಿಂದ ರೈತರ ಕೆಲಸ ಕಾರ್ಯಗಳಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗದ್ದಲ್ಲಿ ಕೊರತೆಯಿರುವ ಸಿಬ್ಬಂದಿಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಕಳೆದ ಮೂರು ವರ್ಷಗಳಿಂದ ರೈತರು ತಮ್ಮ ಜಮೀನುಗಳನ್ನು ಸರ್ವೆ ಮಾಡಿಸಲು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು)

ಈ) ಹಾಗಿದ್ದಲ್ಲಿ, ಅಂತಹ ರೈತರಿಂದ ಹಣ ಪಾವತಿಸಿ ಕೊಂಡು ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಮತ್ತು ಪೂರ್ಣಗೊಳಿಸದೇ ಇರುವ ಸಂಖ್ಯೆ ಎಷ್ಟು (ವಿವರಗಳನ್ನು ನೀಡುವುದು)?

ಶ್ರೀ ಕೆ. ಎಸ್. ಈಶ್ವರಪ್ಪ
(ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿದೆ. ಮದ್ದೂರು ಭೂಮಾಪನ ಶಾಖೆಯಲ್ಲಿ ಪರ್ಯಾವೀಕ್ಷಕರ 2 ಹುದ್ದೆ ಮಂಜೂರಾಗಿದ್ದು ಹಾಲಿ ಒಂದು ಹುದ್ದೆ ಭರ್ತಿಯಾಗಿದ್ದು, 1 ಹುದ್ದೆ ಖಾಲಿ ಇರುತ್ತದೆ ಹಾಗೂ ಭೂಮಾಪಕರ 13 ಹುದೆ ಮಂಜೂರಾಗಿದ್ದು, ಹಾಲಿ 5 ಹುದ್ದೆಗಳು ಭರ್ತಿಯಾಗಿದ್ದು, 8 ಹುದ್ದೆ ಖಾಲಿ ಇರುತ್ತವೆ.

ಆ) ರಾಜ್ಯದಲ್ಲಿ ಖಾಲಿ ಇರುವ ಒಟ್ಟು 1834 ಭೂಮಾಪಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ:23–11–2012ರಂದು ಪ್ರಕಟಿಸಲಾಗಿದೆ. ಈ ಭೂಮಾಪಕರ ನೇಮಕಾತಿಯ ಸಂಪೂರ್ಣ ಪ್ರಕ್ರಿಯೆ ಮುಗಿದು ಅವರ ತರಬೇತಿ ಮುಕ್ತಾಯಗೊಂಡ ನಂತರ ಮದ್ದೂರು ತಾಲ್ಲೂಕು ಭೂಮಾಪನಾಶಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು.

ಇ) ಕಳೆದ ಮೂರು ವರ್ಷಗಳಿಂದ ಮದ್ದೂರು ತಾಲ್ಲೂಕು ರೈತರು ತಮ್ಮ ಜಮೀನುಗಳನ್ನು ಸರ್ವೆ ಮಾಡಿಸಲು ಸಲ್ಲಿಸಿರುವ ಅರ್ಜಿಗಳ ಸಂಖ್ಯೆ ಈ ಕೆಳಗಿನಂತಿರುತ್ತವೆ:–

1. ಹದ್ದುಬಸ್ತು ಅರ್ಜಿಗಳು=775
2. 11ಇ ಅರ್ಜಿಗಳು= 8387
3. ತತ್ಕಾಲ್ ಪೋಡಿ ಅರ್ಜಿಗಳು=1109

ಒಟ್ಟು ಅರ್ಜಿಗಳು=10271

ಈ) ಹಣ ಪಾವತಿಸಿಕೊಂಡು ಸರ್ವೆ ಕಾರ್ಯ ಪೂರ್ಣಗೊಳಿಸಿರುವ ಮತ್ತು ಗೊಳಿಸದೇ ಇರುವ ಸಂಖ್ಯೆಗಳ ವಿವರ ಈ ಕೆಳಗಿನಂತಿರುತ್ತವೆ:

ಕ್ರಮ ಸಂಖ್ಯೆ	ಪ್ರಕರಣಗಳು	ಅಳತೆಯಾದ ಅರ್ಜಿಗಳಸಂಖ್ಯೆ	ಅಳತೆಗೆ ಬಾಕಿ ಇರುವ ಅರ್ಜಿಗಳ ಸಂಖ್ಯೆ
1	ಹದ್ದುಬಸ್ತು	470	305
2	11ಇ	7683	704
3	ತತ್ಕಾಲ್ ಪೋಡಿ	889	220
	ಒಟ್ಟು	**9042**	**1229**

ಶ್ರೀಮತಿ ಕಲ್ಪನಾ ಸಿದ್ದರಾಜು : ಮದ್ದೂರು ತಾಲ್ಲೂಕಿನ ಸರ್ವೆ ಕಚೇರಿಯಲ್ಲಿ 13 ಹುದ್ದೆಗಳು ಮಂಜೂರಾಗಿದ್ದರೂ 3 ಹುದ್ದೆಗಳು ಮಾತ್ರ ಖಾಯಂ ಆಗಿವೆ. 2 ಹುದ್ದೆಗಳಲ್ಲಿ deputation ಮೇಲೆ ಇದ್ದಾರೆ. ಇನ್ನೂ ೮ ಹುದ್ದೆಗಳು ಖಾಲಿ ಇವೆ. ಸಾವಿರಾರು ಜನ ರೈತರು ನಮ್ಮ ತಾಲ್ಲೂಕಿನಲ್ಲಿ ಪೋಡಿ ಇರಲಿ, ಏನೇ ಇರಲಿ ಸರ್ವೇ ಕಾರ್ಯಕ್ಕೆ ಒಂದೆರಡು ವರ್ಷಗ ಳಿಂದ ಅಲೆಯುತ್ತಿದ್ದರೂ ಕೂಡ ಕೆಲಸ ಆಗುತ್ತಿಲ್ಲ. ತಹಸೀಲ್ದಾರ್‌ರವರನ್ನು ಕೇಳಿದರೆ, ಸರ್ವೇಯರ್ ಇಲ್ಲ ಎಂದು ಹೇಳುತ್ತಿದ್ದಾರೆ. ನಾನು ಈ ವಿಚಾರವನ್ನು ಡಿಸಿಯವರ ಗಮನಕ್ಕೂ ತಂದಿದ್ದೇನೆ. ಆದರೆ, ಅವರು ಇದರ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ನಮ್ಮ ಅತಗೂರು ಹೋಬಳಿಯಲ್ಲಿ ರೀಸರ್ವೆಗೆ 2000-2001ರಲ್ಲಿ ಆಯ್ಕೆ ಮಾಡಿದ್ದರು. 5 ವರ್ಷಗಳ ಕಾಲ ಮಾಡಿದರೂ ಕೂಡ ಸಂಪೂರ್ಣವಾಗಿ ಸರಿಪಡಿಸಲಿಲ್ಲ. ಏಕೆಂದರೆ RTC ಬೇರೆಯವರ ಹೆಸರಿನಲ್ಲಿದೆ. ಅಳತೆಗೆ ಕೂಡ ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಒಂದು ತಂಡ ರಚಿಸಿ, ಅತಗೂರು ಹೋಬಳಿಯಲ್ಲಿ ರೀಸರ್ವೆ ಕಾರ್ಯವನ್ನು ಮಾಡಿಸಬೇಕು. ಆದಷ್ಟು ಬೇಗ ಈ ಹುದ್ದೆಗಳನ್ನು ಭರ್ತಿ ಮಾಡಿ ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕು. ನಮ್ಮ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ರೈತರು ತಾಲ್ಲೂಕು ಕಚೇರಿಗೆ ಸುತ್ತುತ್ತಿದ್ದಾರೆ. ಆದಷ್ಟು ಬೇಗ ರೈತರ ತೊಂದರೆಯನ್ನು ನಿವಾರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಕರ್ನಾಟಕ ರಾಜ್ಯದಲ್ಲಿ ಭೂ ಮಾಪಕರ ನೇಮಕಾತಿಯಾಗಬೇಕೆಂದು ಪ್ರಯತ್ನ ಮಾಡಿ ಈಗಾಗಲೇ 1834 ಭೂ ಮಾಪಕರನ್ನು ನೇಮಕಾತಿ ಪ್ರಕ್ರಿಯೆ ಹೆಚ್ಚುಕಡಿಮೆ ಮುಗಿದಿದೆ. ದಿ:23.11.12ರಂದು ಅವರ ಪಟ್ಟಿಯನ್ನು ಕೂಡ ನಾವು ಪ್ರಕಟ ಮಾಡಿದ್ದೇವೆ. ಈಗ ಹೆಚ್ಚುಕಡಿಮೆ ಅವರ training ಕೂಡ ಮುಗಿಯುವ ರೂಪಕ್ಕೆ ಬಂದು police verification ಆಗುತ್ತಿದೆ. ಇದು ಆಗುತ್ತಿದ್ದ ಹಾಗೆ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಈ ರೀತಿ ಖಾಲಿ ಹುದ್ದೆಗಳಿವೆಯೋ ಎಲ್ಲಾ ಖಾಲಿ ಹುದ್ದೆಗಳನ್ನೂ ಕೂಡ ಭರ್ತಿ ಮಾಡುವುದಕ್ಕೆ ಸರ್ಕಾರ ಗಮನ ಕೊಡುತ್ತದೆ.

ಶ್ರೀ ಸುರೇಶ್‌ಗೌಡ : ನಾಗಮಂಗಲದಲ್ಲಿ 11 posts ಇವೆ. ಇಬ್ಬರು surveyors ಇದ್ದಾರೆ. ಅಲ್ಲಿದ್ದವರನ್ನೂ ಬೇರೆ ಕಡೆಗೆ deputation ಮೇಲೆ ಕಳುಹಿಸಿದ್ದಾರೆ. ಅವರನ್ನು ವಾಪಸ್ ಕರೆಸಿ.

4. ಪ್ರಕಟಣೆ

ಅಧ್ಯಕ್ಷರು ಮಾನ್ಯ ಸದಸ್ಯರ ಗಮನಕ್ಕೆ, ಪೂಜ್ಯ ಸಿದ್ದೇಶ್ವರ ಸ್ವಾಮೀಜಿಗಳು ಸದನದ ಕಲಾಪವನ್ನು ವೀಕ್ಷಿಸಲು ಪ್ರೇಕ್ಷಕರ ಗ್ಯಾಲರಿಗೆ ಬಂದಿರುತ್ತಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಸಿದ್ದೇಶ್ವರ ಸ್ವಾಮೀಜಿಯವರು ಸದನದ ಕಲಾಪವನ್ನು ವೀಕ್ಷಿಸಲು ಬಂದಿರುವುದು ಬಹಳ ಸಂತೋಷದ ಸಂಗತಿ. ಇನ್ನೂ ಸದನ 2–3 ದಿವಸ ನಡೆಯುತ್ತಿರಬೇಕಾದರೆ, ಅವರು ಒಂದು ಗಂಟೆ ಕಾಲ ಶಾಸಕರನ್ನು ಕುರಿತು ಮಾತನಾಡುವಂಥ ಅವಕಾಶವನ್ನು ತಾವು ಮಾಡಿದರೆ ನಿಜವಾಗಿಯೂ ಬಹಳ ಧನ್ಯರು.

ಅವರನ್ನು ನಾವು ಕ್ಯಾಸೆಟ್ ಮುಖೇನ ನೋಡುತ್ತಿರುತ್ತೇವೆ. ಕ್ಯಾಸೆಟ್‌ನ್ನು ಕೇಳುತ್ತಿರುತ್ತೇವೆ ಆದರೆ, ನಿಜಸ್ಥಿತಿಯಲ್ಲಿ ಅವರನ್ನು ನೋಡತಕ್ಕಂಥ ಮಾತು ಕೇಳತಕ್ಕ ಅವಕಾಶವಿರುವುದಿಲ್ಲ. ದಯಮಾಡಿ ಸದನ ಮುಗಿಯುವುದರೊಳಗೆ ತಾವು ಆ ಕೆಲಸ ಮಾಡಿದರೆ ನಮಗೆಲ್ಲಾ ಬಹಳ ದೊಡ್ಡ ಸಹಾಯ ಮಾಡಿದ ಹಾಗೆ ಆಗುತ್ತದೆ.